ಆ) ಕಳೆದ ಎರಡು ವರ್ಷಗಳಲ್ಲಿ ಸ್ಥಾಪಿಸಿದ ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಇ) ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಸ್ಥಾಪಿಸಲಾದ ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):

ಅ) ಪ್ರತಿ ಗ್ರಾಮ ಪಂಚಾಯಿತಿ ಕೇಂದ್ರಕ್ಕೆ ಒಂದು ಗ್ರಂಥಾಲಯವನ್ನು ಪ್ರಾರಂಭಿಸುವುದಕ್ಕೆ ಗ್ರಾಮ ಪಂಚಾಯಿತಿಯಿಂದ ಬಾಡಿಗೆ ರಹಿತ ಸೂಕ್ತ ಕಟ್ಟಡ ಒದಗಿಸಿದಲ್ಲಿ ಸರ್ಕಾರದ ಯೋಜನೆಯಂತೆ ಹಣಕಾಸಿನ ಪರಿಮಿತಿಯಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಆ) 3 ಸಂಚಾರಿ ಗ್ರಂಥಾಲಯಗಳು, 15 ಶಾಖಾ ಗ್ರಂಥಾಲಯಗಳು, 1000 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಹೀಗೆ ಒಟ್ಟು 1018 ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದೆ.

ಇ) 04. ಪಂದು ಶಾಖಾ ಗ್ರಂಥಾಲಯ ಹಾಗೂ 3 ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಸ್ಥಾಪಿಸಲಾಗಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಂದರ್ಶಕ ಸಮಿತಿಗಳು

1415 (2043)

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಂದರ್ಶಕ ಸಮಿತಿಗಳನ್ನು ರಚಿಸಲು ಅನುಸರಿಸಲಾದ ಮಾನದಂಡಗಳೇನು?

ಆ) ಈ ಸಂದರ್ಶಕ ಸಮಿತಿಗಳ ಪಟ್ಟಿಗಳ ಉದ್ದೇಶಗಳೇನು? ಮತ್ತು ಪ್ರತಿವರ್ಷ ನಡೆಸಬೇಕಾದ ಸಭೆಗಳ ಸಂಖ್ಯೆ ಎಷ್ಟು?

ಇ) ಸಂದರ್ಶಕ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡುವ ವಿಧಾನಗಳೇನು?

ಈ) ಉಳ್ಳಾಲ ವಿಧಾನ ಸಭಾ ಕ್ಷೇತ್ರಗಳಲ್ಲಿರುವ ಪ್ರಾಥಮಿಕ ಆರೋಗ್ಯ

ಕೇಂದ್ರಗಳಲ್ಲಿ ನಡೆಸಲಾದ ಸಭೆಗಳ ಸಂಖ್ಯೆ ಎಷ್ಟು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಈ ಕೆಳಕಂಡ ಸಂದರ್ಶಕ ಸಮಿತಿಯ ಸದಸ್ಯರುಗಳನ್ನು ಒಳಗೊಂಡಂತೆ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗುವುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಂದರ್ಶಕ ಸಮಿತಿಗಳನ್ನು ರಚಿಸುವಲ್ಲಿ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ

1.	ಸ್ಥಳೀಯ ವಿಧಾನಸಭಾ ಸದಸ್ಯರು	ಅಧ್ಯಕ್ಷರು
2.	ಸ್ಥಳೀಯ ಜಿಲ್ಲಾ ಪಂಚಾಯತ್ ಸದಸ್ಯರು-	ಸದಸ್ಯರು
3.	ಅಧ್ಯಕ್ಷರು ಗ್ರಾಮಪಂಚಾಯತ್	"
4.	ಸ್ಥಳೀಯ ತಾಲ್ಲೂಕು ಪಂಚಾಯತ್ ಸದಸ್ಯರು	"
5.	ಸ್ಥಳೀಯ ಎಸ್.ಸಿ.ಎಸ್.ಟಿ.ಪ್ರತಿನಿಧಿ	"
6.	ಸ್ಥಳೀಯ ಮಹಿಳಾ ಪ್ರತಿನಿಧಿ	"
7.	ಹಿಂದುಳಿದ ವರ್ಗದ ಪ್ರತಿನಿಧಿ	"
8.	ಸ್ಥಳೀಯ ಅಲ್ಪಸಂಖ್ಯಾತ ಪ್ರತಿನಿಧಿ	"
9.	ಸ್ಥಳೀಯ ರೈತ ಸಮುದಾಯ ಪ್ರತಿನಿಧಿ	"
10.	ಸ್ಥಳೀಯ ಸಮಾಜ ಸೇವಾ ಕಾರ್ಯಕರ್ತರು	"
11.	ಸ್ಥಳೀಯ ರೋಟರಿ ಕ್ಲಬ್ : ಲಯನ್ಸ್ ಸಂಸ್ಥೆ ಪ್ರತಿನಿಧಿ	"
12.	ಸ್ಥಳೀಯ ಮುಖ್ಯ ಸೇಕವರವರು	"
13.	ಸ್ಥಳೀಯ ಪೋಲೀಸ್ ವರಿಷ್ಠಾಧಿಕಾರಿ	"
14.	ಸ್ಥಳೀಯ ಪತ್ರಿಕಾ ವರದಿಗಾರರ ಪ್ರತಿನಿಧಿ	"
15.	ವೈದ್ಯಾಧಿಕಾರಿ (ಆಡಳಿತ) ಸಮುದಾಯ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರತಿನಿಧಿ ಸದಸ್ಯ ಕಾರ್ಯದರ್ಶಿ.	"

ಆ) 1. ಸಂಬಂಧಪಟ್ಟ ಆರೋಗ್ಯ ಸಂಸ್ಥೆಗಳಿಗೆ ತಿಂಗಳಲ್ಲಿ ಒಂದು ಸಲವಾದರೂ ಭೇಟಿ ನೀಡುವುದು.

2. ಸಂಸ್ಥೆಯಲ್ಲಿ ವೈದ್ಯಕೀಯ ಉಪಚಾರಗಳು ಸಮರ್ಪಕವಾಗಿದೆಯೋ ಎಂಬುದನ್ನು ಹಾಗೂ ಔಷಧಿ ಸಂಗ್ರಹ ಸಾಕಷ್ಟು ಪ್ರಮಾಣದಲ್ಲಿದೆಯೆ ಎಂಬುದನ್ನು ಪರಿಶೀಲಿಸುವುದು.

3. ಸಂಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ವೈದ್ಯರ ಹಾಗೂ ಪೂರಕ ಸಿಬ್ಬಂದಿಗಳ ಹಾಜರಾತಿಯೊಡನೆ ವೈದ್ಯರ ಸೇವೆಗಳ ಬಗ್ಗೆ ಪರಿಶೀಲಿಸುವುದು.

4. ಸಂಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ಜನ ಸಾಮಾನ್ಯರಿಂದ ಸಾರ್ವಜನಿಕ ಹಿತಾಸಕ್ತಿಯ ಬಗ್ಗೆ ವೈದ್ಯರುಗಳ ಸೇವೆ, ಸಿಬ್ಬಂದಿ ಸೇವೆ, ಸಮರ್ಪಕವಾದ ಔಷಧೋಪಚಾರಗಳ ಬಗ್ಗೆ ದೂರುಗಳು ಇದ್ದಲ್ಲಿ ಪರಿಶೀಲಿಸಿ ಇಲಾಖಾ ಮುಖ್ಯಸ್ಥರಾದ ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರಿಗೆ ಹಾಗೂ ವೈದ್ಯರುಗಳ ಜನ ಸಾಮಾನ್ಯರೊಡನೆ ಇದ್ದ ಸಂಪರ್ಕಗಳ ಬಗ್ಗೆ ಸರ್ಕಾರಕ್ಕೆ ವರದಿ ನೀಡಿ ಸೂಕ್ತ ಕ್ರಮ ಜರುಗಿಸುವಂತೆ ನೋಡಿಕೊಳ್ಳುವುದು.

5. ಸಂಸ್ಥೆಯ ಸಾಮಾನ್ಯ ಕಾರ್ಯನಿರ್ವಹಣೆಯ ಬಗ್ಗೆ ಪರಿಶೀಲಿಸಿ ಸಂಸ್ಥೆಯ ಉಚ್ಚಮಟ್ಟದ ಆಡಳಿತ ವೈದ್ಯಕೀಯ ಸೇವೆಗಳ ಬಗ್ಗೆ ವೈದ್ಯಾಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡುವುದು.

6. ಸಂಸ್ಥೆಗೆ ದಾನಿಗಳಿಂದ ಅವಶ್ಯಕ ವಸ್ತುಗಳ ಸಲಕರಣೆಗಳ ಬಗ್ಗೆ ಮನಗಾಣಿಸಿ ನಿಗಮಗಳಿಂದ ಸಂಸ್ಥೆಗೆ ದಾನ, ಬಳುವಳಿ ಪಡೆಯಲು ಅದ್ಯತೆ ನೀಡುವುದು. ಸಂದರ್ಶಕ ಸಮಿತಿ ಕೊನೆ ಪಕ್ಷ ತಿಂಗಳಿಗೆ ಒಂದು ಸಲವಾದರೂ ಸಭೆ ಸೇರಬೇಕು ಅಥವಾ ಅಧ್ಯಕ್ಷರ ಇಚ್ಛೆಯಂತೆ ಹೆಚ್ಚು ಸಭೆಗಳನ್ನು ನಡೆಸಬಹುದು.

ಇ) ಜಿಲ್ಲಾ ಪರಿಷತ್ ಅನುಮೋದನೆಯೊಂದಿಗೆ ಬರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಸಮಿತಿ ರಚಿಸಿ ಆದೇಶಿಸುತ್ತದೆ.

ಈ) ಪ್ರಾಥಮಿಕ ಆರೋಗ್ಯ ಕೇಂದ್ರ ಉಳ್ಳಾಲದಲ್ಲಿ ಈ ತನಕೆ ಸಭೆ 1 ಮಾತ್ರ ಜರುಗಿದ್ದು ಉಳಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಭೆ ನಡೆದಿಲ್ಲ.

ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ರಸ್ತೆ ದುರಸ್ತಿ.